ಬುದ್ಧತ್ವ-
ಸಂತೋಷಕ್ಕೊಂದೇ
ದಾರಿ



ಉದಯಕುಮಾರ
ಹಬ್ಬು

ಬುದ್ಧತ್ವ-ಸಂತೋಷಕ್ಕೊಂದೇ ದಾರಿ



ಉದಯಕುಮಾರ ಹಬ್ಬು

ಬುದ್ಧತ್ವ - ಸಂತೋಷಕ್ಕೊಂದೇ ದಾರಿ

Buddhathva–Santhoshakkonde Dari

Written by

ಉದಯಕುಮ್ಮಾ ಹಬ್ಬು

Uday Kumar Habbu

Abhishek House, Bittulu
Kinnigoli - 574150, Dakshina Kannada
Mobile : 9902761720

Uday Kumar Habbu asserts the moral right to be identified as the author of this work

This is a fiction and all characters and incidents described in this book are the product of the author's imagination.
Any resemblance to actual persons, living or dead, is entirely coincidental.

Copyright (c) Author

ಮುನ್ನುಡಿ

ಈ ಪುಸ್ತಕದಲ್ಲಿ ಬುದ್ಧರ ಬೋಧನೆಗಳ ಸಾರ ಅಡಗಿದೆ. ಇವು ಎಲ್ಲ ಮಾನವ ಜನಾಂಗಕ್ಕಾಗಿ ಇರುವಂಥಹ ಬೋಧನೆಗಳಾಗಿವೆ. ಕೇವಲ ಒಂದು ವರ್ಗದ ಜನರಿಗೆ ಮತ್ರ ಸೀಮಿತವಾಗಿಲ್ಲ. ಇದು ವಿಶ್ವಮಾನ್ಯ ಬೋಧನೆಯಾಗಿದೆ. ಇದನ್ನು ಅನುಷ್ಠಾನಕ್ಕೆ ತಂದರೆ, ಅಭ್ಯಸಿಸಿದರೆ ಅವರು ಶಾಶ್ವತ ಸುಖವನ್ನು ಕಾಣುವರು. ಒಬ್ಬನು ತನ್ನನ್ನು ತಾನು ಅಷ್ಟಾಂಗ ಮಾರ್ಗವು ರೂಪರೇಷೆ ಪಡೆದ ಈ ಬೋಧನೆಗಳೊಂದಿಗೆ ಚೆಕ್ ಮಾಡಿಕೊಳ್ಳಬೇಕು, ಹಾಗೆ ಮಾಡಿದಾಗ ಕೊನೆಗೆ ಆ ವ್ಯಕ್ತಿಯು ಜೀವನದ ಅತ್ಯುನ್ನತ ಆದರ್ಶಗಳ ಪ್ರಕಾರ ತನ್ನಿಂದ ತಾನೆ ಯೋಚಿಸಲು, ಕ್ರಿಯೆಯನ್ನು ಮಾಡಲು ಮತ್ತು ಮಾತಾಡಲು ಪ್ರಾರಂಭಿಸುತ್ತಾನೆ ಮತ್ತು ಈ ಪ್ರಕ್ರಿಯೆಯಲ್ಲಿ ಸಂತೋಷವನ್ನು ಪಸರಿಸಲು ಸಮರ್ಥನಾಗುತ್ತಾನೆ ಮತ್ತು ತಾನೆ ಸ್ವತಃ ಸಂತೋಷವನ್ನು ಪಡೆಯುತ್ತಾನೆ. ಉದಾತ್ತ ಅರಿಯ ಸತ್ಯಗಳು ತನ್ನ ನಿತ್ಯ ವರ್ತನೆಯನ್ನು ವಿಶ್ಲೇಷಿಸಲು ಉಪಯೋಗಿಸಲು ಮನುಷ್ಯರಿಗಾಗಿ ಇವೆ. ತನ್ಮೂಲಕ ಅವನು ತನ್ನನ್ನು ತಾನು ತಿದ್ದಿಕೊಳ್ಳುತ್ತಾನೆ ಮತ್ತು ನಿಧಾನವಾಗಿ ಅಧ್ಯಾತ್ಮಿಕ ಬೆಳವಣಿಗೆಯಲ್ಲಿ ಪ್ರಗತಿಯನ್ನು ಸಾಧಿಸುತ್ತಾನೆ. ನಾವು ನಮ್ಮ ತಪ್ಪುಗಳಿಂದ ಕಲಿಯುತ್ತೇವೆ. ಮತ್ತು ಹೆಚ್ಚು ಉತ್ತಮ ವ್ಯಕ್ತಿಗಳಾಗುತ್ತೇವೆ. ಪರಿಸ್ಥಿತಿಗಳು ನಿಮ್ಮಿಷ್ಟದಂತೆ ಇಲ್ಲದಿದ್ದರೆ ದೂರಬೇಡಿ. ಜೀವನದಲ್ಲಿ ವೈರುದ್ಧ್ಯಗಳಾದ ಧನಾತ್ಮಕ ಮತ್ತು ಋಣಾತ್ಮಕ, ಬೆಳಕು–ಕತ್ತಲೆ, ಸಿಹಿ–ಕಹಿ ದುಃಖ–ಸಂತೋಷ ಇತ್ಯಾದಿಗಳಿರುವುದು ಸಹಜ. ಇದು ಬದುಕಿನ ಸ್ವಭಾವ ಮತ್ತು ಈ ವಿರೋಧಾಭಾಸಗಳನ್ನು ನಾವು ಅನುಭವಿಸಲೇಬೇಕು, ಆಗ ನಾವು ನಮ್ಮ ಜೀವನದಲ್ಲಿ ಬರುವ ಧನಾತ್ಮಕ, ಮಧುರ ಆನಂದವನ್ನು ಮೆಚ್ಚಿಕೊಳ್ಳುತ್ತೇವೆ.

ಈ ಕಿರುಪುಸ್ತಕದ ಲೇಖಕರು ಒಂದು ಪ್ರಾಚೀನ ಬೋಧನೆ,

ಒಂದು ತತ್ವಶಾಸ್ತ್ರವು ಸಂತೋಷವನ್ನು, ತೃಪ್ತಿಯನ್ನು ಮತ್ತು ದೈಹಿಕ ಮತ್ತು ಮಾನಸಿಕ ದುಃಖದಿಂದ ಬಿಡುಗಡೆಯನ್ನು – ಯಾರು ಇದನ್ನು ಅಭ್ಯಸಿಸುತ್ತಾರೆಯೊ ಅವರಿಗೆ– ತರಬಲ್ಲದು ಎಂದು ನಂಬಿದ್ದಾರೆ. ಅವರು ಸಾವಿರಾರು ಕನ್ನಡಿಗರಲ್ಲಿ ಇದನ್ನು ಹಂಚಿಕೊಳ್ಳಲು ಅತ್ಯಂತ ವಿನೀತರಾಗಿ ಬಯಸಿದ್ದಾರೆ. ಈ ಗೊಂದಲ–ಗಲಾಟೆ ಗದ್ದಲಗಳ ಆಧುನಿಕ ಯುಗದಲ್ಲಿ, ಕಾರ್ಯದೊತ್ತಡದ ಜಗತ್ತಿನಲ್ಲಿ ಪ್ರಾಚೀನ ಕಾಲದ ಶಾಂತಿ ಮತ್ತು ಪ್ರಶಾಂತತೆಯನ್ನು ಬಯಸುವವರಿಗೆ ಈ ಕೃತಿಯನ್ನು ಬರೆಯಲಾಗಿದೆ.

ನಗರದ ಗಲಾಟೆ, ಗದ್ದಲ ಗೊಂದಲಗಳಿಂದ ಮತ್ತು ಗದ್ದಲದ ಬೀದಿಗಳಿಂದ ದೂರ ನಮ್ಮ ಪುಟ್ಟ ಕೋಣೆಯ ಶಾಂತ ಏಕಾಂತದಲ್ಲಿ, ನಾವು ಕುಳಿತು ಜ್ಞಾನೋದಯಗೊಂಡ ಭಗವಾನ್ ಬುದ್ಧರ ಉದಾತ್ತ ಸಿದ್ಧಾಂತದ ಮೇಲೆ ಧ್ಯಾನಿಸೋಣ. ನಾವು ಈ ಕ್ಷಣಕ್ಕೆ ಅತಿಯಾಸೆ, ದ್ವೇಷ, ಕೆಟ್ಟಭಾವನೆ ಮತ್ತು ಮೋಹವಿಭ್ರಮೆಯಿಂದ ಕೂಡಿದ ಆಧುನಿಕ ನಾಗರಿಕತೆಯ ತತ್ವಶಾಸ್ತ್ರವನ್ನು ಬದಿಗಿಡೋಣ. ನಾವು ಸ್ವಲ್ಪ ಹೊತ್ತು ನಮಗಾಗಿ ಭಗವಾನರು ಕಂಡುಹುಡುಕಿದ ಹಾದಿಯಗುಂಟ ಪ್ರಯಾಣ ಮಾಡೋಣ. ಇಪ್ಪತ್ತನೆಯ ಶತಮಾನದ ಸಂತ್ರಸ್ಥ ಮನಸ್ಸು ಮತ್ತು ಬಿರುಗಾಳಿಯನ್ನು ಬುದ್ಧರ ಬೋಧನೆಯ ಅಸೀಮ ಸಂತೋಷ, ಆನಂದದೊಂದಿಗೆ ವಿನಿಮಯ ಮಾಡೋಣ.

ಈ ಪುಸ್ತಕವನ್ನು ಓದಲಿರುವ ನಿಮ್ಮಲ್ಲಿ ಹಲವರು ಬಹುಕಾಲದವರೆಗೆ ಸುಖದ ಮತ್ತು ಶಾಂತಿಯ ಚಾವಿಯನ್ನು ಹುಡುಕುತ್ತಿದ್ದಿರಬಹುದು. ನಾನೂ ಕೂಡ ಆ ಹುಡುಕಾಟ ಮಾಡಿದ್ದೇನೆ ಮತ್ತು ಅದೇ ಸತ್ಯವನ್ನು ಕಂಡೇ ಕಾಣುತ್ತೀರಿ ಎಂಬುದು ನನ್ನ ಹೃದಯಂತರಾಳದ ಪ್ರೀತಿಪೂರ್ಣ ಬಯಕೆಯಾಗಿದೆ.

ಸರ್ವೇ ಜನಾಃ ಸುಖಿನೋ ಭವಂತು.

■ **ಉದಯಕುಮಾರ ಹಬ್ಬು.**